

# ಕಪ್ಪತಗುಡ್ಡ ಕನ್ನಡನಾಡಿನ ಜೀವನಾಡಿ

**ಕನ್ನಡನಾಡಿನ ಕಲಶಪ್ರಾಯ ಗುಡ್ಡಗಳಲ್ಲೊಂದಾದ ಕಪ್ಪತಗುಡ್ಡ ತನ್ನ ಸೌಂದರ್ಯದಿಂದ ಮಾತ್ರವಲ್ಲದೆ, ತಾಯ್ತನದಿಂದಲೂ ಗಮನ ಸೆಳೆಯುವಂತಹದ್ದು. ಅಪಾರ ಜೀವವೈವಿಧ್ಯದ ನೆಲೆಯಾದ ಈ ಗುಡ್ಡ, ಗದಗ ಹಾಗೂ ಸುತ್ತಮುತ್ತಲ ಜಿಲ್ಲೆಗಳಿಗೆ ಜೀವವಾಯುವನ್ನು ಉಣಿಸುವ ಅಮೃತದಾಯಿನಿ.**

**■ ಕೆ.ಎಂ. ಸತೀಶ್ ಬೆಳ್ಳಕ್ಕಿ**

ಕಪ್ಪತಗುಡ್ಡ 'ಉತ್ತರ ಕರ್ನಾಟಕದ ಸಹ್ಯಾದ್ರಿ' ಎಂದೇ ಪ್ರಸಿದ್ಧ. ಚಳಿ ಹಾಗೂ ಮಳೆಗಾಲದಲ್ಲಿ ಕಪ್ಪತಗುಡ್ಡಕ್ಕೆ ತುಂಬುಪ್ರಾಯ ಮೂಡುತ್ತದೆ. ತುಂತುರು ಮಳೆಯಲ್ಲಿ, ಮಂಜಿನ ಹೊದಿಕೆಯಲ್ಲಿ ಇಡೀ ಗುಡ್ಡವೇ ಹಸುರಿನಿಂದ ಕಂಗೊಳಿಸುತ್ತದೆ. ಸ್ವರ್ಗವೇ ಧರೆಗಿಳಿದಂತೆ ಭಾಸವಾಗುತ್ತದೆ.

'ಎಪ್ಪತ್ತು ಗಿರಿಗಿಂತ ಕಪ್ಪತಗಿರಿ ನೋಡು', 'ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಕಪ್ಪತಗಿರಿ ಹತ್ತಬೇಕು' ಎಂಬ ಜನಪದರ ನುಡಿಗಳನ್ನು ಎಷ್ಟು ಉಜ್ಜಿದರೂ ಕ್ಲೀಷೆ ಅಂತ ಅನ್ನಿಸುವುದಿಲ್ಲ. ಆ ನಾಣ್ಣುಡಿಗಳ ವರ್ಣನೆಯ ಸೊಬಗನ್ನು ಕಪ್ಪತಗುಡ್ಡ ಇಂದಿಗೂ ಉಳಿಸಿಕೊಂಡಿದೆ. ಈ ಕಾರಣಕ್ಕಾಗಿಯೇ, ಕಪ್ಪತಗುಡ್ಡ ಗದಗ ಜಿಲ್ಲೆಗೆ ಮಾತ್ರ ಸೀಮಿತಗೊಳ್ಳದೇ ರಾಜ್ಯದಲ್ಲಿರುವ ಏಳು ಕೋಟಿ ಜನರ ಆಸ್ತಿ ಎಂಬ ಹಿರಿಮೆಗೆ ಪಾತ್ರವಾಗಿದೆ.

ಜೀವವೈವಿಧ್ಯ ಹಾಗೂ ಅಪರೂಪದ ಸಸ್ಯ ವೈವಿಧ್ಯಗಳ ತಾಣ ಎಂದು ಗುರುತಿಸಿಕೊಂಡಿರುವ ಕಪ್ಪತಗುಡ್ಡ ಕರ್ನಾಟಕದ ಪರಿಸರ ವ್ಯವಸ್ಥೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಪರಿಸರ ಸಮತೋಲನದಲ್ಲಿ ಕಪ್ಪತಗುಡ್ಡದ ಹರವು ಜಿಲ್ಲೆಯಿಂದಾಚೆಗೂ ಚಾಚಿಕೊಂಡಿದ್ದು, ಸುತ್ತಮುತ್ತಲಿನ ನಾಲ್ಕೈದು ಜಿಲ್ಲೆಗಳ ಮೇಲೆ ಪ್ರಭಾವ ಬೀರುತ್ತ ಮಧ್ಯ ಕರ್ನಾಟಕದ ಹೃದಯ ಎನಿಸಿಕೊಂಡಿದೆ.

ಹಸಿರು ಹಬ್ಬ
ಪರಿಸರ ದಿನದ ವಿಶೇಷ

ಗದಗ, ಶಿರಹಟ್ಟಿ ಹಾಗೂ ಮುಂಡರಗಿ ತಾಲ್ಲೂಕಿನ 60 ಕಿ.ಮೀ. ಉದ್ದಕ್ಕೂ ಕಪ್ಪತಗುಡ್ಡ ವಿಸ್ತರಿಸಿಕೊಂಡಿದ್ದು, ಎಲ್ಲೆಲ್ಲೂ ಹಸುರಿನ ನಗು ತುಳುಕಿಸುತ್ತಿದೆ. ಕಪ್ಪತಗುಡ್ಡದ ಸೊಬಗಿಗೆ ಜಾನಪದ, ಪಾರಂಪರಿಕ ಹಿರಿಮೆ, ಗರಿಮೆಗಳೂ ಸೇರಿಕೊಂಡಿವೆ. ಇಲ್ಲಿನ ಜನ ಜಾನುವಾರುಗಳೊಂದಿಗೆ ಕಪ್ಪತಗುಡ್ಡದ ಕಾಡಿನ ಸಂಸ್ಕೃತಿ ಬೆಸೆದುಕೊಂಡಿದೆ.

ಅಪಾರ ಖನಿಜ ಸಂಪತ್ತು, ಅಪರೂಪದ ಔಷಧೀಯ ಸಸ್ಯಗಳನ್ನು ಒಡಲಲ್ಲಿ ಇಟ್ಟುಕೊಂಡಿರುವ ಕಾರಣ ಈ 'ವನ್ಯಜೀವಿಧಾಮ'ದ ಮೇಲೆ ಪರಿಸರ ಪ್ರೇಮಿಗಳಿಗೆ ವಿಶೇಷ ಪ್ರೀತಿ. ಗಣಿ ಕಂಪನಿಗಳ ಮಾಲೀಕರಿಗೆ ಎಂದಿಗೂ ತೀರದ ಮೋಹ ಇದೆ!

ಇತ್ತೀಚೆಗೆ ಕಪ್ಪತಗುಡ್ಡದಲ್ಲಿ ಮನುಷ್ಯನ ಹಸ್ತಕ್ಷೇಪ ಕಡಿಮೆಯಾಗಿದೆ. ಹಾಗಾಗಿ, ಕಪ್ಪತಗುಡ್ಡ ವರ್ಷದಿಂದ ವರ್ಷಕ್ಕೆ ದಟ್ಟವಾಗುತ್ತಿದೆ. ಆದರೆ, ದಟ್ಟವಾಗುವ ಸಂದರ್ಭದಲ್ಲಿ ಒಂದು ಅಪಾಯ ಎದುರಾಗಿದ್ದು ಲಂಟಾನಾ, ಪಾರ್ಥೇನಿಯಂ ಜಾಸ್ತಿಯಾಗುತ್ತಿದೆ. ಇವು ಜಾಸ್ತಿ ಆದರೆ, ಮೂಲ ಸ್ವರೂಪಕ್ಕೆ ಧಕ್ಕೆ ಆಗುವ ಅಪಾಯ ಇದೆ. ಅವುಗಳನ್ನು ಕೀಳಿಸಿ ಮೂಲಸಸ್ಯಗಳು, ಔಷಧೀಯ ಗಿಡಗಳು, ಸುಗಂಧ ದ್ರವ್ಯ, ಕಾಡು ಹಣ್ಣಿನ ಸಸ್ಯಗಳನ್ನು ಉಳಿಸಬೇಕು ಎಂಬುದು ಪರಿಸರಪ್ರಿಯರ ಆಗ್ರಹವಾಗಿದೆ.

ಕಳೆ ಗಿಡಗಳ ಸಮಸ್ಯೆ ಬಂಡೀಪುರ, ನಾಗರಹೊಳೆ ಅರಣ್ಯದಲ್ಲಿ ಕೂಡ ಎದುರಾಗಿತ್ತು.